ಪದಬಂಧ




**ಎಡದಿಂದ ಬಲಕ್ಕೆ**

1. ಮುಂದಕ್ಕೆ ಹೊರಡಿಸಲು ಬಂದವರನ್ನು ಕಂಡೊಡನೆ ಮುಗುಳ್ನಗೆಯೇ? 4
3. ಆಕೆಯ ರಾಗಾಲಾಪನೆ ಮುಗಿದೊಡನೆ ಸ್ವಲ್ಪ ಹೊತ್ತು ಸಂತಸದ ಮಾತುಕತೆ 3
4. ಆತನಿಗೆ ಸರಿಹೊಂದದ ವಸ್ತುಗಳನ್ನೆಲ್ಲ ಸುಟ್ಟು ಹಾಕುವುದೇ? 3
6. ಚಿಕೋರಿಯನ್ನು ಸ್ವಲ್ಪ ಬೆರೆಸಿ ಮಾಡಿದ ಕಾಫಿಯೂ ನಾಲಿಗೆಗೆ ಹಿತಕರವೇ? 4
7. ಅಪಾಯದ ಇಂಥ ಘೋರ ರೂಪ ತುಂಬ ವಿರಳ ಬಿಡಿ 4
8. ನಗಿಸುತ್ತ ನಗಿಸುತ್ತಲೇ ನಡು ನಡುವೆ ಅದೇನೋ ಗುಟ್ಟು ಮಾತು 4
10. ತಡವಾಗಿ ತಲುಪಿದರೂ ಹೇಗೋ ನೋಡಿದ್ದಾಯಿತು ಭಾರೀ ಜಲಪಾತ 4
12. ಅಂಗಾಲನ್ನು ಒತ್ತಿಸಿಕೊಳ್ಳುವುದೇ ಆಯಿತು ಸದಾಕಾಲ 4
14. ಹಾಸ್ಯ ಪ್ರಜ್ಞೆಯೇ ಇಲ್ಲದವನ ಕುರಿತೇ ಅಲ್ಲಿ ಪರಿಹಾಸ್ಯ, ವ್ಯಂಗ್ಯ 4
16. ಇದು ಸಾಗರದ ಕೆಳಗೆ ಕೊರೆದಿರುವ ಹಾದಿ 3
17. ವಾರಿಧಿಯ ದುರ್ಬಳಕೆಗೆ ತೀವ್ರ ಪ್ರತಿಭಟನೆ 3
18. ತಳಿರನ್ನೆಲ್ಲ ತೊಳೆಯಲು ಕಿಂಚಿತ್ತೂ ಕಲಕಿಲ್ಲದ ಜಲ 4

**ಮೇಲಿನಿಂದ ಕೆಳಕ್ಕೆ**

1. ಮಂಟಪದಲ್ಲಿ ಕುಳಿತ ಎಲ್ಲರಿಗೂ ಅದೇಕೋ ಅರೆ ನಿದ್ದೆ 3
2. ಅವನ ಸಹೋದರನಿಗೆ ಎಲ್ಲರೊಡನೆಯೂ ಸಲುಗೆ ಇದೆ 3
3. ಅವರೀರ್ವರದೂ ರೂಪವಷ್ಟೇ ಅಲ್ಲ, ಕಿಂಚಿತ್ತೂ ವ್ಯತ್ಯಾಸ ಇಲ್ಲದ ಲಕ್ಷಣ ಕೂಡ 4
5. ವೈಮನಸ್ಯ ದೂರ ಮಾಡಿದವರಿಗೆ ಮರೆಯದೆ ವಂದಿಸು 3
7. ಅಮ್ಮನನ್ನೇ ಸತಾಯಿಸುವುದಕ್ಕೆ ಯಾರಿಂದಲೂ ಒಪ್ಪಿಗೆ ಇಲ್ಲ 4
9. ಬಟ್ಟೆ ಜಾಲಾಡಲು ಸೂಕ್ತವಿಲ್ಲದಷ್ಟು ಬಿಸಿಯಾದ ನೀರು 4
11. ಈ ವಸ್ತುಗಳನ್ನು ಸಾಲಾಗಿ ಇರಿಸುವ ಕೆಲಸ ಎಷ್ಟು ಸುಲಭ ಅಲ್ಲವೇ? 3
13. ಅವನೊಡನೆ ಸಂಬಂಧವನ್ನು ಗಟ್ಟಿಗೊಳಿಸಿದ್ದು ಗಾಢ ಸ್ನೇಹ 4
14. ಪುರೋಗತಿಯನ್ನೇ ಕುಗ್ಗಿಸಿದರೂ ಅದೇ ಅರ್ಥ ಹೇಗೆ? 3
15. ನಾರಿನುಡುಗೆಯದೇ ಈ ವಿಧ ಎಷ್ಟು ನಯ, ಮೃದು ನೋಡಿ 3

---

## 15–08–2024 ಉತ್ತರಗಳು

**ಎಡದಿಂದ ಬಲಕ್ಕೆ**

1. ಅಭ್ಯಂತರ 3. ಸುರಭಿ 4. ಜಾತಕ 6. ಬಲಹೀನ 7. ಲವಕುಶ 9. ರಸಾರುಹ 12. ಅನುರಾಗ 14. ರಿದಮಾ (ಮಾದರಿ ಹಿಂದುಮುಂದು) 15. ಭರಣಿ 16. ರಿಣಮುಕ್ತ

**ಮೇಲಿನಿಂದ ಕೆಳಕ್ಕೆ**

1. ಅಭಿಮಾನ 2. ರಜಾಕಾಲ 3. ಸುಫಲ 5. ಕಲಕು 6. ಬಡಿವಾರ 8. ಶರವೇಗ 10 ಸಾವೇರಿ 11. ಹಟಮಾರಿ 12. ಅತಿಭಕ್ತಿ 13. ರಾಗಿಣಿ

ಪ್ರಶ್ನಾಂಕಣ

# ವಿಶ್ವದ ಅತ್ಯಂತ ಶೀತಲ ನೆಲೆ ಯಾವುದು?

ಸಾಮಾನ್ಯ ಗ್ರಹಿಕೆಗೆ ನಿಲುಕುವ ಅತ್ಯಂತ ಶೀತಲ ವಸ್ತು ಮಂಜುಗಡ್ಡೆ. ಅದರ ಉಷ್ಣತೆ ಸೊನ್ನೆ ಡಿಗ್ರಿ ಸೆಲ್ಸಿಯಸ್. ಆದರೆ, ವಿಸ್ಮಯ ಏನೆಂದರೆ, ಭೂಮಿಯ ಮೇಲೆ, ನಮ್ಮ ಸೌರವ್ಯೂಹದಲ್ಲಿ ಮತ್ತು ವಿಶ್ವದಲ್ಲೂ ಕೂಡ ಶೂನ್ಯಕ್ಕಿಂತ ಕಡಿಮೆ ತಾಪಮಾನದ ಪ್ರದೇಶಗಳು ಬೇಕಾದಷ್ಟಿವೆ. (ವಿಶ್ವದಲ್ಲಿ ಇರಬಹುದಾದ ಗರಿಷ್ಠ ಶೈತ್ಯ ಶೂನ್ಯಕ್ಕಿಂತ ಕೆಳಗೆ 273 ಡಿಗ್ರಿ ಸೆಲ್ಸಿಯಸ್. ಇದಕ್ಕಿಂತ ಕಡಿಮೆ ಉಷ್ಣತೆ ಸಾಧ್ಯವೇ ಇಲ್ಲ). ಈ ಮೂರೂ ಪ್ರದೇಶಗಳಲ್ಲಿನ ಅತ್ಯಂತ ಶೈತ್ಯದ ವಿಶ್ವ ದಾಖಲೆಯ ಪ್ರದೇಶಗಳು ಇವು:

- ನಮ್ಮ ಭೂಮಿಯ (ಚಿತ್ರ 3) ಗರಿಷ್ಠ ಶೈತ್ಯದ ನೆಲೆ ಅಂಟಾರ್ಕ್ಟಿಕಾ ಭೂ ಖಂಡದಲ್ಲಿದೆ. ಸರಾಸರಿ ಎರಡು ಕಿಲೋಮೀಟರ್‌ಗಿಂತ ಹೆಚ್ಚು ದಪ್ಪನಾದ ಹಿಮಹಾಳೆ ನೆಲವನ್ನು ಆವರಿಸಿರುವ ಪೂರ್ವ ಅಂಟಾರ್ಕ್ಟಿಕ್ ಪ್ರಸ್ಥಭೂಮಿ ಪ್ರದೇಶ ಈ ದಾಖಲೆಯನ್ನು ಸೃಜಿಸಿದೆ. ಸುಮಾರು 2.5 ದಶಲಕ್ಷ ಚದರ ಕಿಲೋಮೀಟರ್ ವೈಶಾಲ್ಯ ಇರುವ ಈ ಪ್ರದೇಶದ ಸರಾಸರಿ ಉಷ್ಣತೆ ಶೂನ್ಯಕ್ಕಿಂತ 94 ಡಿಗ್ರಿ ಸೆಲ್ಸಿಯಸ್ ಕಡಿಮೆ!
- ನಮ್ಮ ಇಡೀ ಸೌರವ್ಯೂಹದಲ್ಲಿರುವ ಅತ್ಯಂತ ಶೈತ್ಯದ ಪ್ರದೇಶ ನಮ್ಮ ಚಂದ್ರನಲ್ಲೇ ಇದೆ (ಚಿತ್ರ1,2,3) ಅಲ್ಲಿನ ಉಷ್ಣತೆ ಸೌರವ್ಯೂಹದ ಎಲ್ಲ ಗ್ರಹಗಳ ಪಥಗಳನ್ನೂ ದಾಟಿದ ನಂತರದ ನೆಲೆಯ ಕುಬ್ಜ ಗ್ರಹ ಪ್ಲೂಟೋದ ಮೇಲ್ಮೈ ತಾಪಮಾನಕ್ಕಿಂತ ಕಡಿಮೆ! ನಮಗೆದುರಾದ ಚಂದ್ರನ ಉತ್ತರ ಗೋಳಾರ್ಧದಲ್ಲಿ, ಚಂದ್ರನ ಉತ್ತರ ಧ್ರುವದ ಸನಿಹದಲ್ಲಿ ಒಂದು ಬೃಹತ್ ಕುಳಿ ಇದೆ. ಹರ್ಮೈಟ್ ಕ್ರೇಟರ್ ಎಂಬ ಆ ಹಳ್ಳದಲ್ಲಿ ಉಷ್ಣತೆ ಶೂನ್ಯಕ್ಕಿಂತ 247 ಡಿಗ್ರಿ ಸೆಲ್ಸಿಯಸ್‌ನಷ್ಟು ಕಡಿಮೆ ಇದೆ (ಕುಬ್ಜ ಗ್ರಹ ಪ್ಲೂಟೋದ ಮೇಲ್ಮೈ ಉಷ್ಣತೆ ಶೂನ್ಯಕ್ಕಿಂತ 229 ಡಿಗ್ರಿ ಸೆಲ್ಸಿಯಸ್‌ನಷ್ಟು ಕಡಿಮೆ).




- ಅಂತರಿಕ್ಷದಲ್ಲಿ ನಮ್ಮಿಂದ 1200 ಜ್ಯೋತಿರ್ವರ್ಷ (1 ಜ್ಯೋತಿರ್ವರ್ಷ= ಪ್ರತಿ ಸೆಕೆಂಡ್‌ಗೆ 3 ಲಕ್ಷ ಕಿ.ಮೀ. ವೇಗದಲ್ಲಿ ಬೆಳಕು ಒಂದು ವರ್ಷಕಾಲದಲ್ಲಿ ಕ್ರಮಿಸುವ ಒಟ್ಟು ದೂರ) ದೂರದಲ್ಲಿ ಒಂದು ನೀಹಾರಿಕೆ (ನೆಬ್ಯುಲಾ) ಇದೆ. ಅದರ ಹೆಸರು ಬೂಮ್ ರಾಂಗ್ ನೆಬ್ಯುಲಾ. ಸೆಂಟಾರಸ್ ನಕ್ಷತ್ರ ಪುಂಜದಲ್ಲಿರುವ ಈ ಗ್ರಹೀಯ ನೀಹಾರಿಕೆ (ಪ್ಲಾನೆಟರಿ ನೆಬ್ಯುಲಾ) ಒಂದು ಜ್ಯೋತಿರ್ವರ್ಷದಷ್ಟು ತ್ರಿಜ್ಯಕ್ಕೆ ಹರಡಿದೆ. ಈ ನೀಹಾರಿಕೆಯ ಉಷ್ಣತೆ ಶೂನ್ಯಕ್ಕಿಂತ 272.15 ಡಿಗ್ರಿ ಸೆಲ್ಸಿಯಸ್ ನಷ್ಟು ಕಡಿಮೆ ಇದೆ. ಇಡೀ ವಿಶ್ವದಲ್ಲಿನ ಅತ್ಯಂತ ಶೀತಲ ನೆಲೆ ಎಂಬ ದಾಖಲೆ ಈ ನೀಹಾರಿಕೆಯದೇ ಆಗಿದೆ.

■ ಎನ್. ವಾಸುದೇವ್